

ಬಳೆಗಳು, ಮಣ್ಣಿನ ಬಳೆಗಳು, ಪ್ಲಾಸ್ಟಿಕ್, ಫೈಬರ್ ಬಳೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಇವುಗಳ ಹೊರತಾಗಿ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಬಳೆಗಳಲ್ಲಿಯೇ ಅಧಿಕ ಟ್ರೆಂಡ್ ಸೃಷ್ಟಿಸಿರುವುದೇ ಕಾಶ್ಮೀರಿ ಬಳೆಗಳು.

ಕಾಶ್ಮೀರಿ ಬಳೆಗಳು ಆಭರಣ ಲೋಕದಲ್ಲಿಯೇ ಒಂದು ಹೊಸ ಕ್ರೇಜ್ ಹುಟ್ಟುಹಾಕಿವೆ. ಸಾಂಪ್ರದಾಯಿಕ ವಿನ್ಯಾಸ ಮತ್ತು ಆಧುನಿಕ ಶೈಲಿಯಿಂದಾಗಿ ಗಮನಸೆಳೆದಿರುವ ಈ ಬಳೆಗಳು ಎಲ್ಲರ ಕೈಯಲ್ಲೂ ಮಿಂಚುತ್ತಿವೆ. ಇನ್ನು ಈ ಬಳೆಗಳನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ. ತುಂಬಾ ಹಗುರವಾಗಿರುವ ಈ ಬಳೆಗಳನ್ನು ಧರಿಸುವುದೇ ಒಂದು ಕ್ರೇಜ್. ದಿನನಿತ್ಯದ ಬಳಕೆಗೆ ಸೂಕ್ತವಾಗಿರುವ ಈ ಬಳೆಗಳು ನಾಜೂಕಾದ ಹೂವಿನ ವಿನ್ಯಾಸ, ಬೀಡ್ಸ್, ಗೆಜ್ಜೆಗಳಿಂದ ಅಲಂಕಾರಗೊಂಡಿವೆ. ಅತ್ಯಂತ ಆಕರ್ಷಕವಾಗಿದ್ದು, ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ದಿನಪೂರ್ತಿ ಧರಿಸಿದರೂ ಅತ್ಯಂತ ಕಂಫರ್ಟ್ ಆಗಿರುವ ಈ ಕಾಶ್ಮೀರಿ ಬಳೆಗಳು ಯುವತಿಯರ ಹಾಟ್ ಫೇವರೇಟ್ ಎಂತಲೇ ಹೇಳಬಹುದು.

ಈ ಬಳೆಗಳನ್ನು ಯಾವುದೇ ಗಾಜಿನ ಬಳೆಗಳ ಜೊತೆ ಮಿಕ್ಸ್ ಮ್ಯಾಚ್ ಮಾಡಿ ಧರಿಸಬಹುದು. ಸಾಮಾನ್ಯವಾಗಿ ಶುಭ ಸಮಾರಂಭಗಳಲ್ಲಿ ಎಲ್ಲರೂ ರೇಷ್ಮೆ ಸೀರೆ, ಗಾಗ್ರಾ, ಲೆಹೆಂಗಾ ಧರಿಸುವುದು ಸರ್ವೇಸಾಮಾನ್ಯ. ಈ ಸಂದರ್ಭದಲ್ಲಿ ನಿಮ್ಮ ಉಡುಪಿಗೆ ಮ್ಯಾಚ್ ಆಗುವ ಕಲರ್‌ಫುಲ್ ಗಾಜಿನ ಬಳೆಗಳ ಮಧ್ಯೆ ಮಧ್ಯೆ ಗೆಜ್ಜೆಗಳನ್ನು ಅಳವಡಿಸಿದ ಕಾಶ್ಮೀರಿ ಗೋಲ್ಡ್ ಬಳೆಗಳನ್ನು ಮಿಕ್ಸ್ ಮ್ಯಾಚ್ ಮಾಡಿ ಧರಿಸಿದರೆ ರಿಚ್ ಲುಕ್ ನಿಮ್ಮದಾಗುತ್ತದೆ. ಮದುವೆ ಸಮಾರಂಭ ಎಂದರೆ ಕೇಳಬೇಕೇ ಮದುಮಗಳನ್ನು ಅಲಂಕರಿಸಲು ಮಾಂಗ್‌ಟೀಕಾದಿಂದ ಹಿಡಿದು ಕಾಲಿನ ಗೆಜ್ಜೆಯವರೆಗೂ ಸಾಕಷ್ಟು ವೈವಿಧ್ಯದ ಆ್ಯಕ್ಸೆಸರೀಸ್ ಮಾರುಕಟ್ಟೆಗೆ ಬಂದಿವೆ. ಮದುವೆ ಸಂಭ್ರಮವನ್ನು ಇಮ್ಮಡಿಗೊಳಿಸಲು ರಾಯಲ್ ಕಾಶ್ಮೀರಿ ಬ್ಯಾಂಗಲ್‌ಗಳು ಮಾರುಕಟ್ಟೆಗೆ ಎಂಟ್ರಿ ಕೊಟ್ಟಿವೆ. ಮದುಮಗಳು ಧರಿಸುವ ಉಡುಪಿಗೆ ಮ್ಯಾಚ್ ಆಗುವ ಎಲ್ಲಾ ಬಣ್ಣ ಬಣ್ಣದ ಬಳೆಗಳ ಜೊತೆ ಈ ಕಾಶ್ಮೀರಿ ಬಳೆಗಳನ್ನು ಧರಿಸಿದರೆ ಅವಳ ಅಂದ ಇಮ್ಮಡಿಯಾಗುತ್ತದೆ.

## ಬಳೆ ತೊಡುವಾಗ ಈ ಟಿಪ್ಸ್ ಪಾಲಿಸಿ...

- ಹಬ್ಬದ ಸೀಸನ್‌ನಲ್ಲಿ ಗ್ರ್ಯಾಂಡ್ ಉಡುಪಿನ ಜೊತೆಗೆ ಮಿರುಮಿರುಗುವ ಬಳೆ ಧರಿಸಿ.
- ಪ್ಲಾಸ್ಟಿಕ್ ಬಳೆ, ರಿಂಗ್ ಬಳೆ, ರೇಷ್ಮೆ ನೂಲಿನಲ್ಲಿ ಸುತ್ತಿರುವ ಬಳೆ, ಡಿಸೈನರ್ ಬಳೆ, ಕುಂದನ್ ವರ್ಕ್ ಬಳೆ, ಕಡಗ ಬಳೆಗಳನ್ನು ಆಯಾಯ ಉಡುಪಿನ ವಿನ್ಯಾಸಕ್ಕೆ ಅನುಗುಣವಾಗಿ ತೊಟ್ಟುಕೊಳ್ಳಿ.
- ಗಾಜಿನ ಸಾದಾ ಬಳೆಗಳ ಮಧ್ಯೆ ಚಿನ್ನದ ಬಳೆ ಕೊನೆಯಲ್ಲಿ ವಜ್ರ ಅಥವಾ ಹವಳದ ಬಳೆ ಧರಿಸಿದರೆ ನೋಡಲು ಅಂದವಾಗಿ ಕಾಣುತ್ತದೆ.
- ರೇಷ್ಮೆ ಸೀರೆ ಧರಿಸಿದಾಗ ಗಾಜಿನ ಬಳೆಯಲ್ಲಿ ಸೀರೆಗೆ ಮ್ಯಾಚ್ ಇರುವ ಹಾಗೆ ಧರಿಸಿ ಕೊನೆಯಲ್ಲಿ ಬಾರ್ಡರ್ ಇರುವ ಕಲರ್ ಬಳೆಗಳ ಆಯ್ಕೆ ಮಾಡಿಕೊಳ್ಳಿ.
- ಗಾಗ್ರಾ ಧರಿಸಿದಾಗ ಅದಕ್ಕೆ ಮ್ಯಾಚ್ ಆಗುವ ಕುಂದನ್ ಡಿಸೈನ್ ಬಳೆಗಳನ್ನು ಧರಿಸಿ.
- ಸಲ್ವಾರ್‌ಗೆ ಥ್ರೆಡ್ ಬಳೆಗಳನ್ನು ಮ್ಯಾಚ್ ಮಾಡಿ ಹಾಕಿಕೊಂಡರೆ ಉತ್ತಮ.
- ಹವಳ, ಮುತ್ತು, ಜೇಡ್ ವರ್ಕ್ ಇರುವ ದುಬಾರಿ ಬಳೆಗಳನ್ನು ಮದುವೆ ಮುಂಜಿಗಳಂತಹ ಶುಭ ಸಮಾರಂಭಗಳಿಗೆ ಧರಿಸಿ.
- ಗಾಜಿನ ಬಳೆಗಳನ್ನು ಪೇಪರ್‌ನಲ್ಲಿ ಸುತ್ತಿ ಇಟ್ಟರೆ ಅದರ ಅಂದ ಹಾಳಾಗುವುದಿಲ್ಲ.
- ಡಿಸೈನರ್ ಬಳೆಗಳನ್ನು ಬಾಕ್ಸ್‌ಗೆ ಹಾಕಿ ಇಡಿ.
- ವಜ್ರ ಮುತ್ತು ಚಿನ್ನದ ಬಳೆಗಳನ್ನು ಬೇರೆ ಬೇರೆಯಾಗಿ ಒಡವೆ ಇಡುವ ಬಾಕ್ಸ್‌ನಲ್ಲಿಯೇ ಹಾಕಿಡಿ.



### ವಿವಿಧ ಬಣ್ಣ, ವಿನ್ಯಾಸ

ಹಲವು ವಿನ್ಯಾಸ ಹಾಗೂ ಬಣ್ಣಗಳಲ್ಲಿ ದೊರೆಯುವ ಈ ಕಾಶ್ಮೀರಿ ಬಳೆಗಳು ಮಹಿಳೆಯರ ಮೆಚ್ಚುಗೆ ಗಳಿಸಿವೆ. ಸೆಲೆಬ್ರಿಟಿಗಳು ಹಾಗೂ ಸಿನಿಮಾ ತಾರೆಯರು ತಾವು ಹೋಗುವ ಸಮಾರಂಭಕ್ಕೆ ತಮ್ಮ ಸೀರೆಯ ಜೊತೆಗೆ ಈ ತರಹದ ಕಾಶ್ಮೀರಿ ಬಳೆಗಳನ್ನು ಧರಿಸಿದ್ದನ್ನು ನೋಡಿದ ಸಾಮಾನ್ಯ ಮಹಿಳೆಯರೂ ಈ ಬಳೆಗಳ ಮೊರೆ ಹೋಗಿದ್ದಾರೆ. ಗ್ರ್ಯಾಂಡ್ ಲುಕ್ ಬಯಸುವವರು ಉಡುಪಿಗೆ ಮ್ಯಾಚ್ ಆಗುವ ಗ್ರ್ಯಾಂಡ್ ಲುಕ್ ನೀಡುವ ಕಾಶ್ಮೀರಿ ಘುಂಘರು (ಗೆಜ್ಜೆ) ಬಳೆಗಳು ಮಾರುಕಟ್ಟೆಯಲ್ಲಿ ಖರೀದಿಸಬಹುದು.

ತುಂಬಾ ಸಿಂಪಲ್ಲಾಗಿ ಇರುವ ಬಳೆಗಳನ್ನು ಇಷ್ಟಪಡುವವರು ಹೆಚ್ಚು ಡಿಸೈನ್ ಇಲ್ಲದ, ನಾಜೂಕಾದ ಬಳೆಗಳನ್ನು ಧರಿಸಬಹುದು. ಇದು ನಿಮಗೆ ಎಲಿಗೆಂಟ್ ಲುಕ್ ನೀಡುತ್ತದೆ.

ಕಾಶ್ಮೀರಿ ಬಳೆಗಳನ್ನು ಖರೀದಿಸುವಾಗ ಚೆನ್ನಾಗಿರುವ ಬಳೆಗಳನ್ನೇ ಖರೀದಿಸಿ. ಇವು ದೀರ್ಘ ಬಾಳಿಕೆ ಬರುತ್ತವೆ. ಇವುಗಳನ್ನು ಉತ್ತಮ ಮೆಟೀರಿಯಲ್‌ನಿಂದ ತಯಾರಿಸಲಾಗಿರುತ್ತದೆ.



ಹಾಗೂ ಇವುಗಳ ಫಿನಿಶಿಂಗ್ ಸೂಕ್ತವಾಗಿದ್ದರೆ ಇವು ಸುಲಭವಾಗಿ ಹಾಳಾಗುವುದಿಲ್ಲ. ದಿನನಿತ್ಯ ಬಳಕೆ ಮಾಡಿದರೂ ಹೊಳಪು ಕಳೆದುಕೊಳ್ಳುವುದಿಲ್ಲ. ಈ ಕಾಶ್ಮೀರಿ ಬಳೆಗಳನ್ನು ಕಾಳಜಿಯಿಂದ ನೋಡಿಕೊಂಡರೆ ವರ್ಷಗಳು ಉರುಳಿದರೂ, ಬಣ್ಣ ಮಾಸುವುದಿಲ್ಲ. ಇವುಗಳನ್ನು ಧರಿಸಿ ಸಮಾರಂಭ ಮುಗಿಸಿ ಬಂದ ನಂತರ ಕಾಟನ್‌ನ ಬಿಳಿ ಬಟ್ಟೆಯಲ್ಲಿ ಸುತ್ತಿ ಇಟ್ಟರೆ ತುಂಬಾ ಬಾಳಿಕೆ ಬರುತ್ತವೆ.

ಕಾಟನ್ ಬಟ್ಟೆ ಈ ಬಳೆಗಳಿಗೆ ಅಂಟಿದ ಬೆವರು ಅಥವಾ ನೀರನ್ನು ಹೀರಿಕೊಂಡು ಬಳೆ ಹಾಳಾಗದಂತೆ ತಡೆಯುತ್ತದೆ. ಈ ಬಳೆಗಳು ಬರೀ ಸಾಂಪ್ರದಾಯಿಕ ಉಡುಪುಗಳಿಗೆ ಮಾತ್ರವಲ್ಲ ಆಧುನಿಕ ಉಡುಪುಗಳಾದ ಜೀನ್ಸ್, ಫ್ರಾಕ್ಸ್, ಮಿಡಿಗಳ ಮೇಲೂ ಸಿಂಪಲ್ಲಾಗಿ ಬ್ಲಾಕ್ ಮೆಟಲ್ ಅಥವಾ ಸಿಲ್ವರ್ ಮೆಟಲ್‌ನ ಒಂದೊಂದೇ ಬಳೆಗಳನ್ನು ನಿಮ್ಮ ಉಡುಪಿಗೆ ಮ್ಯಾಚ್ ಮ್ಯಾಡಿ ಧರಿಸಬಹುದು.

ಆಧುನಿಕ ಉಡುಪುಗಳ ಜೊತೆಗೆ ತಿಳಿಬಣ್ಣದ ಹಗುರ ಬಳೆಗಳ ಮಧ್ಯೆ ಒಂದೊಂದು ಕಾಶ್ಮೀರಿ ಬಳೆಗಳನ್ನು ಧರಿಸಬಹುದು. ಆಪ್ತ ಗೆಳತಿಯರಿಗೆ ಗಿಫ್ಟ್ ನೀಡಲು ಈ ತರಹದ ಬಳೆಗಳು ಅತ್ಯುತ್ತಮವಾಗಿದ್ದು, ಸಭೆ, ಸಮಾರಂಭಗಳು, ಹಬ್ಬ ಮುಂತಾದ ವಿಶೇಷ ಸಂದರ್ಭಗಳಲ್ಲಿ ಇವುಗಳನ್ನು ಉಡುಗೊರೆಯಾಗಿ ನೀಡಿದರೆ ಹಬ್ಬದ ಮೆರುಗು ಮತ್ತಷ್ಟು ಹೆಚ್ಚುತ್ತದೆ. ■